ಹತ್ತು ವರ್ಷಗಳ ಹಿಂದೆ ಅವಳ ತೌರು ಮನೆಯವರು ಕೊಟ್ಟಿದ್ದ ಹತ್ತು ಎಕರೆ ಎರೆಹೊಲವನ್ನು ಭೂಮಾಲೀಕನೊಬ್ಬ ಕಬ್ಜ ಮಾಡಿಕೊಂಡನಂತೆ. ಹೊಲ ಕೈಬಿಟ್ಟು ಹೋಯಿತೆಂದು ಗಂಡ ಕೆಲವು ದಿನ ಹುಚ್ಚು ಹಿಡಿದವನಂತೆ ಕೂಗಾಡುತ್ತಿದ್ದನಂತೆ. ನಂಗೆ ಅನ್ಯಾಯ ಮಾಡಿದೋರನ್ನು ಕೊಂದು ಹಾಕ್ತೀನಿ ಅನ್ನುತ್ತಿದ್ದನಂತೆ. ಕಡಪಾಕ್ಕೆ ಹೋಗಿ ಬಂದು ಎಲ್ಲರನ್ನೂ ನೋಡಿಕೊಳ್ತೀನಿ ಅಂತ ಹೇಳಿ ಹೋದವನು ಮತ್ತೆ ಊರಿಗೆ ಬರಲೇ ಇಲ್ಲವಂತೆ.

ಆರು ತಿಂಗಳು ಗಂಡನ ದಾರಿ ನೋಡಿ ಸಾಕಾಗಿ ಮಗನ ಜತೆ ಅನಂತಪುರಕ್ಕೆ ಬಂದಳಂತೆ. ಮಗ ಈಗ ಅನಂತಪುರದ ಕೋರ್ಟ್‌ನಲ್ಲಿ ಭೂಮಿ ಕಿತ್ತುಕೊಂಡವನ ಮೇಲೆ ಕೇಸು ಹಾಕಿದ್ದಾನಂತೆ. ರಾಜ ಮನ್ನಾರ್ ವಕೀಲರು ಭೂಮಿ ಕೊಡಿಸುತ್ತೇನೆ. ನ್ಯಾಯ ನಿನ್ನ ಕಡೆ ಇದೆ ಅಂದಿದ್ದಾರಂತೆ. ಮಗ ಕೋರ್ಟಿನ ಹತ್ತಿರ ಚಾ ದುಕಾನು ನಡೆಸುತ್ತಿದ್ದಾನಂತೆ. ವ್ಯಾಪಾರ ಚೆನ್ನಾಗಿದೆಯಂತೆ. ಅವನಿಗಿನ್ನೂ ಮದುವೆ ಆಗಿಲ್ಲವಂತೆ. ಬಡ ಬಗ್ಗರು, ಹೊಲ, ಮನೆ ಇಲ್ಲದವರ ಬಗ್ಗೆ ಅವನಿಗೆ ಅನುಕಂಪ ಜಾಸ್ತಿಯಂತೆ. ಸಹಾಯ ಕೇಳಿಕೊಂಡು ಬಂದೋರಿಗೆ ವಕೀಲರಿಗೆ ಪರಿಚಯ ಮಾಡಿಸುತ್ತಾನಂತೆ. ಕೇಸು ಹಾಕಲು ಅವರಿಗೆ ಸಹಾಯ ಮಾಡುತ್ತಾನಂತೆ. ಕೋರ್ಟಿನ ರೂಲ್ಸುಗಳೆಲ್ಲ ಅವನಿಗೆ ಗೊತ್ತಂತೆ... ಹೀಗೆ ಏನೇನೂ ಅಂತೆ ಕಂತೆಗಳನ್ನು ಸಮಯ ಸಿಕ್ಕಾಗಲೆಲ್ಲ ಹೇಳುತ್ತ, ತನ್ನ ಮಗ ನ್ಯಾಯಕ್ಕಾಗಿ ಹೋರಾಡುವ ದೊಡ್ಡ ವ್ಯಕ್ತಿ ಎನ್ನುವಂತೆ ವರ್ಣಿಸುತ್ತಾಳೆ.

ಈಗ ಕಾಲ ಕೆಟ್ಟು ಹೋಗಿದೆ. ಬಡವರಿಗೆ ಉಳಿಗಾಲ ಇಲ್ಲ ಎಂದು ಪದೇ ಪದೇ ಹೇಳಿಕೊಂಡು ಅಳುತ್ತಾಳೆ. ಅಳು ಎಂದರೆ ಮಾತಾಡುತ್ತಲೇ ಗಂಟಲು ಉಬ್ಬಿ ಬಂದು ಸಣ್ಣಗೆ ಬಿಕ್ಕಳಿಸುತ್ತ ಮಾತು ನಿಲ್ಲಿಸಿಬಿಡುತ್ತಾಳೆ. ಅವಳಿಗೆ ಮತ್ತು ಅವಳ ಮಗನಿಗೆ ದೊಡ್ಡ ಅನ್ಯಾಯವೇ ಆಗಿರಬಹುದು ಅಂತ ವೆಂಕಟಗಿರಿಗೆ ಅನ್ನಿಸುತ್ತಿತ್ತು. ವೆಂಕಟಗಿರಿ, ಮುತ್ಯಾಲ ಇಬ್ಬರೂ ಅವಳನ್ನು ಅಕ್ಕ ಎಂದೇ ಕರೆಯುತ್ತಿದ್ದರು.

ಬಾಲಗೋವಿಂದ ದುಡ್ಡುಕೊಟ್ಟು ಹೋದ ಮೇಲೆ ವೆಂಕಟಗಿರಿ ಸ್ವಲ್ಪ ನಿರಾಳನಾದ. ನಿತ್ಯ ಚೆನ್ನಪ್ಪ ಸರ್ಕಲ್‌ವರೆಗೆ ಬಂದು ಅಲ್ಲಿಂದ ರಾಣಿ ಚೌಲ್ಟ್ರಿ ಹತ್ತಿರದ ಟೀ ಅಂಗಡಿಯ ಮುಂದೆ ಸ್ವಲ್ಪ ಹೊತ್ತು ಕೂತಿದ್ದು, ಅಲ್ಲೇ ವಗ್ಗಾಣಿ ಮೆಣಸಿನಕಾಯಿ ತಿಂದು, ಸ್ವಲ್ಪ ಹೊತ್ತು ಸುಧಾರಿಸಿಕೊಂಡು ನಡೆದುಕೊಂಡೇ ಮನೆಗೆ ಬರುತ್ತಿದ್ದ. ಒಂದು ದಿನ ಲಕ್ಷ್ಮಣನನ್ನು ನೋಡಿ ಬರೋಣವೆಂದು ಅವನು ಕೆಲಸ ಮಾಡುತ್ತಿದ್ದ ಕಟ್ಟಡದ ಹತ್ತಿರ ಹೋದ. ಲಕ್ಷ್ಮಣ ಕೆಲಸಕ್ಕೆ ಬರುತ್ತಿಲ್ಲ. ಹದಿನೈದು ದಿನಗಳಾದವು. ಬಿಸ್ಕೆಟ್ ಫ್ಯಾಕ್ಟರಿ ಹತ್ತಿರದ ಕಾಟನ್‌ಮಿಲ್‌ನಲ್ಲಿ ಕೆಲಸ ಸಿಕ್ಕಿದೆ ಅಂತ ಹೇಳಿ ಹೋದ. ಅವನಿಗೆ ಮಿಲ್‌ನ ಕೆಲಸ ಸರಿ ಬರಲ್ಲ. ಅವನ ಬ್ಯಾಗೊಂದು ಇಲ್ಲೇ ಇದೆ. ಮತ್ತೆ ಇಲ್ಲಿಗೆ ಬಂದರೂ ಬರಬಹುದು ಅಂತ ಅಲ್ಲಿದ್ದ ವಾಚ್‌ಮನ್ ಹೇಳಿದ್ದು ಕೇಳಿ ಗಾಬರಿ ಆಯಿತು. ಲಕ್ಷ್ಮಣ ಎಲ್ಲಿಗೆ ಹೋಗಿರಬಹುದು? ಕಾಟನ್ ಮಿಲ್‌ನಲ್ಲಿ ಕೆಲಸ ಮಾಡುತ್ತಿರಬಹುದೇ? ಅಥವಾ ಪೆದ್ದಾಯನ ಬೇರೆ ಕೆಲಸ ಹೇಳಿರಬಹುದೇ ಅಂತ ಯೋಚಿಸಿದ...

ದಾರಿಯಲ್ಲಿ ನಡೆದುಬರುವಾಗ ಕೊಂಡಯ್ಯ, ಬಾಲಗೋವಿಂದ, ಲಕ್ಷ್ಮಣ ಎಲ್ಲಾದರೂ ಕಾಣಿಸಬಹುದು ಅಂತ ಅವನ ಕಣ್ಣುಗಳು ರಸ್ತೆಯಲ್ಲಿ ಓಡಾಡುವವರು ಮತ್ತು ಆಟೊ ಓಡಿಸುವವರ ಮೇಲೆ ಇರುತ್ತಿದ್ದವು.

★★★

ಉಗಾದಿ ಮುಗಿದ ಮೇಲೆ ತಿರುಪತಿಗೆ ಹೋಗಿ ಬನ್ನಿ ಅಂತ ಕೇಶವರೆಡ್ಡಿ ಮಿಲ್ ಕಾರ್ಮಿಕರಿಗೆ ಹೇಳಿದನಲ್ಲದೆ, ಎಸ್.ಕೆ. ಸ್ಟೀಲ್ ಕಂಪನಿಯ ಕೆಲವು ಕಾರ್ಮಿಕರೂ ನಿಮ್ಮ ಜತೆ ಬರುತ್ತಾರೆ ಅಂತ ಹೇಳಿ ಮೂರು ಬಸ್ಸುಗಳನ್ನು ಗೊತ್ತು ಮಾಡಿದ. ಶನಿವಾರ ರಾತ್ರಿ ಇಲ್ಲಿಂದ ಹೊರಟು ನೇರ ತಿರುಪತಿಗೆ ಹೋಗಿ. ಭಾನುವಾರ ಅಲ್ಲಿದ್ದು ದರ್ಶನ ಮಾಡಿಕೊಳ್ಳಿ. ಸೋಮವಾರ ಬೆಳಗಿನ ಜಾವ ಹೊರಟು